# ಸೂಪರ್‌ಸ್ಟಾರ್ ಶಮಿ

## ಭಾರತದ ಮುಂಚೂಣಿ ಬೌಲರ್‌ನ ರಿವರ್ಸ್ ಸ್ವಿಂಗ್ ಕಥನಗಳು

**ಶಮಿ, ಭಾರತೀಯ ಕ್ರಿಕೆಟ್‌ನ ಹೊಸ ಸೂಪರ್‌ಸ್ಟಾರ್. 2015ರ ವಿಶ್ವಕಪ್‌ನಲ್ಲಿ ಭಾರತ ಕ್ರಿಕೆಟ್ ತಂಡದ ಪ್ರಮುಖ ವೇಗದ ಬೌಲರ್ ಆಗಿದ್ದ ಶಮಿ, 2023ರ ಪಂದ್ಯಾವಳಿಯಲ್ಲೂ ಮುಂಚೂಣಿಯಲ್ಲಿದ್ದಾರೆ. ಹಳೆಯ ಚೆಂಡಿನಲ್ಲಿ ಅವರು ಮಾಡುವ ಮೋಡಿಯ ಗತಗಾಥೆಗಳು ಕೂಡ ತಾಜಾ ಕಥನಗಳಷ್ಟೇ ಆಸಕ್ತಿಕರವಾಗಿವೆ.**

**■ ವಿಶಾಖ ಎನ್.**





ಉತ್ತರಪ್ರದೇಶದ ಅಮ್ರೋಹಾ ಎಂಬ ನಗರದಲ್ಲಿ ಹಳೆಯ ಚೆಂಡನ್ನು ತೀಡಿ ತೀಡಿ ಅದರ ಸೀಮ್ ಬಳಸಿ ಚೆಂಡನ್ನು ರಿವರ್ಸ್ ಸ್ವಿಂಗ್ ಮಾಡುವುದನ್ನು ಗೀಳಾಗಿಸಿಕೊಳ್ಳುತ್ತಿದ್ದ ಹುಡುಗನನ್ನು ಬಾರಾಉದ್ದೀನ್ ಎಂಬ ತರಬೇತುದಾರರು ಗಮನಿಸಿದ್ದರು. ಹಾಗೆ ಚೆಂಡನ್ನು ಉಜ್ಜುತ್ತಾ ಇದ್ದವರೇ, ಇತ್ತೀಚೆಗೆ ಮುಗಿದ ವಿಶ್ವಕಪ್ ಕ್ರಿಕೆಟ್‌ನಲ್ಲಿ ಬೌಲಿಂಗ್ ಜಾದೂ ಮಾಡಿದ ಮೊಹಮ್ಮದ್ ಶಮಿ.

ಸಾಮಾನ್ಯವಾಗಿ ವೇಗದ ಬೌಲರ್‌ಗಳು ಹೊಸ ಚೆಂಡಿನಲ್ಲಿ ಹೆಚ್ಚಿನ ಎಸೆತಗಳನ್ನು ಹಾಕಲು ಇಷ್ಟಪಡುತ್ತಾರೆ. ಪಿಚ್‌ನಲ್ಲಿ ಕೊಂಚ ನೆರವು ಇದ್ದಲ್ಲಿ ಚೆಂಡು ಚೆನ್ನಾಗಿ ಸ್ವಿಂಗ್ ಆಗುತ್ತದೆನ್ನುವುದು ಕ್ರಿಕೆಟ್ ಬಲ್ಲವರ ಸಹಜ ಅಭಿಪ್ರಾಯ. ಶಮಿ ಚಿಕ್ಕಂದಿನಿಂದಲೇ ಹೊಸ ಚೆಂಡಿಗಿಂತ ಹೆಚ್ಚಾಗಿ ಹಳೆ ಚೆಂಡಿನಲ್ಲಿ ಸ್ವಿಂಗ್ ಮಾಡುವುದನ್ನು ಅಭ್ಯಾಸ ಮಾಡಲು ಇಷ್ಟಪಡುತ್ತಿದ್ದರು. ಇದು ಬಾರಾಉದ್ದೀನ್ ಅವರಿಗೂ ಬೇಸರ ಮೂಡಿಸಿದ ದಿನಗಳೂ ಇವೆ. ಯಾಕೆಂದರೆ, ಯಾವುದೇ ಬೌಲಿಂಗ್ ತರಬೇತುದಾರ ಕೂಡ ಹಳೆಯ ಚೆಂಡಿನ ಸ್ವಿಂಗ್ ಅಭ್ಯಾಸವನ್ನು ಅಷ್ಟೇನೂ ಇಷ್ಟಪಡುವುದಿಲ್ಲ. ಚೆಂಡು ಹಳೆಯದಾದ ಮೇಲೆ ಯಾರ್ಕರ್ ಹಾಕುವುದೇ ಒಳ್ಳೆಯದೆಂದು ನಂಬಿದ್ದ ಕಾಲ ಅದು. ಟೂರ್ನಿಗಳಲ್ಲಿ ಪಂದ್ಯ ಆಡಿದ ಮೇಲೆ ಹಳೆಯ ಚೆಂಡನ್ನು ಕೈಗೆತ್ತಿಕೊಂಡು ಸಿಕ್ಕ ಸಿಕ್ಕ ಹುಡುಗರನ್ನೆಲ್ಲ ಕರೆದು ನಿಲ್ಲಿಸಿ, ಶಮಿ ಇನ್ನಷ್ಟು ಎಸೆತಗಳನ್ನು ಬೌಲ್ ಮಾಡುತ್ತಿದ್ದರು. ಹಳೆಯ ಚೆಂಡಿನಲ್ಲಿ ಚೆನ್ನಾಗಿ ಸ್ವಿಂಗ್ ಮಾಡಿದರೆ, ಹೊಸದರಲ್ಲಿ ಮಾಡುವುದೇನೂ ಕಷ್ಟವಲ್ಲ ಎನ್ನುವುದು ಆಗ ಅವರ ನಂಬಿಕೆಯಾಗಿತ್ತು.

2016ರಲ್ಲಿ ಭಾರತದಲ್ಲಿ ಆಡಲು ನ್ಯೂಜಿಲೆಂಡ್ ತಂಡ ಬಂದಿತ್ತು. ಕಾನ್ಪುರದ ಗ್ರೀನ್ ಪಾರ್ಕ್‌ನಲ್ಲಿ ಮೊದಲ ಟೆಸ್ಟ್. ನ್ಯೂಜಿಲೆಂಡ್ ತಂಡದವರು ನೀಲ್ ವ್ಯಾಗ್ನರ್ ಅವರನ್ನು ಸ್ಪೆಷಲಿಸ್ಟ್ ರಿವರ್ಸ್ ಸ್ವಿಂಗ್ ಬೌಲರ್ ಎಂದೇ ಕರೆದುಕೊಂಡು ಬಂದಿದ್ದರು. ಆದರೆ, ಇಡೀ ಟೆಸ್ಟ್‌ನಲ್ಲಿ ಅವರಿಗೆ ಅಂಥದೊಂದು ಎಸೆತದಲ್ಲಿ ಒಂದೂ ವಿಕೆಟ್ ಪಡೆಯಲು ಆಗಲಿಲ್ಲ. ಮೊದಲ ಇನಿಂಗ್ಸ್‌ನಲ್ಲಿ ಎರಡು ವಿಕೆಟ್ ಬಿದ್ದವಾದರೂ ರಿವರ್ಸ್ ಸ್ವಿಂಗ್‌ನಿಂದ ಅಲ್ಲ. ಎರಡನೇ ಇನಿಂಗ್ಸ್‌ನಲ್ಲಿ ಅವರಿಗೆ ಒಂದೂ ವಿಕೆಟ್ ಬೀಳಲಿಲ್ಲ. ಹೇಳಿಕೇಳಿ ಗ್ರೀನ್‌ಪಾರ್ಕ್ ಸ್ಪಿನ್ನರ್‌ಗಳ ನೆಚ್ಚಿನ ಕ್ರಿಕೆಟ್ ಮೈದಾನ. ಅಲ್ಲಿ ಮೊದಲ ಇನಿಂಗ್ಸ್‌ನಲ್ಲಿ ಶಮಿ ಕೂಡ ಒಂದೂ ವಿಕೆಟ್ ಪಡೆಯಲು ಆಗಲಿಲ್ಲ. ಎರಡನೇ ಇನಿಂಗ್ಸ್‌ನಲ್ಲಿ ಅದೆಲ್ಲಿತ್ತೋ ತಂತ್ರ, ಗುಡ್‌ಲೆಂಗ್ತ್‌ಗಿಂತ ಬ್ಯಾಟ್ಸ್‌ಮನ್ ನಿಂತ ದಿಕ್ಕಿನ ತುಸು ಮುಂದಕ್ಕೆ ಎಸೆತವನ್ನು ಹಾಕಿದರು. ಒಳನುಗ್ಗಿದ ಚೆಂಡು ರಪ್ಪನೆ ಪ್ಯಾಡ್‌ಗೆ ಬಡಿದು, ಆಮೇಲೆ ಬ್ಯಾಟ್‌ಗೆ ತಾಕಿತು. ಬಿ.ಜೆ. ವಾಟ್ಲಿಂಗ್ ಎಲ್‌ಬಿಡಬ್ಲ್ಯು ಔಟ್ ಆಗಿ, ಚೆಂಡು ಹೇಗೆ ಒಳನುಗ್ಗಿತು ಎಂಬಂತೆ ಕಕ್ಕಾಬಿಕ್ಕಿಯಾಗಿ ನೋಡಿದರು. ಅದನ್ನು ನೋಡಿದ್ದ ಮಾರ್ಕ್ ಕ್ರೇಗ್ ತಾವು ಎಲ್‌ಬಿ ಬಲೆಗೆ ಬೀಳಕೂಡದು ಎಂದು ವಿಕೆಟ್ ಬಿಟ್ಟು ಆಡತೊಡಗಿದರು. ಶಮಿ ಕೈಯಿಂದ ಸೊಗಸಾದ ರಿವರ್ಸ್ ಸ್ವಿಂಗ್ ಹೊಮ್ಮಿದ್ದೇ ವಿಕೆಟ್‌ಗಳು ಚದುರಿದವು. ಪ್ಯಾಡ್‌ಗೂ ಬ್ಯಾಟ್‌ಗೂ ಇದ್ದ ಅಂತರವನ್ನೇ ದಿಕ್ಕಾಗಿಸಿಕೊಂಡು ಚೆಂಡು ನುಗ್ಗಿತ್ತು. ಹಳೆಯ ಚೆಂಡಿನಲ್ಲಿ ಶಮಿ ಮಾಡಿದ್ದ ರಿವರ್ಸ್ ಸ್ವಿಂಗ್ ಅಭ್ಯಾಸದ ಫಲ ಇದು ಎಂದು ಆಗ ಬಾರಾಉದ್ದೀನ್ ಭಾವುಕತೆಯಿಂದ ಪ್ರತಿಕ್ರಿಯಿಸಿದ್ದರು.

2015ರಲ್ಲಿ ಆಸ್ಟ್ರೇಲಿಯಾದಲ್ಲಿ ವಿಶ್ವಕಪ್ ಕ್ರಿಕೆಟ್